**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.452/2025</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ಪ್ರಶಾಂತ ತಂದೆ ಬಕ್ಕಪ್ಪ ಕಾಕಿ
ವಃ 40 ವರ್ಷ, ಉಃ ಡ್ರೈವರ
ಸಾಃ ಬಸವನಗರ ಸೇಡಂ

2. ಗುರು @ ಗುರುರಾಜ ತಂದೆ ಬಸವಂತಪ್ಪ ಹೊನ್ನಾಪುರ
ವಃ 33 ವರ್ಷ, ಉಃ ಖಾಸಗಿ ಕೆಲಸ
ಸಾಃ ಧೋಣಗಾಂವ , ತಾಃ ಚಿತ್ತಾಪುರ
ಹಾ.ವ. ಬಸವನಗರ ಸೇಡಂ

----

**<u>ದೋ ಷಾ ರೋ ಪ ಣೆ</u>**

ನಾನು **ಶ್ರೀ ಬಾಲು**, ಬಿಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 24-03-2024 ರಂದು ಬೆಳಗಿನ ಜಾವ 01-30 ಗಂಟೆ ಸುಮಾರಿಗೆ ಸೇಡಂ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಬಸವನಗರ ಏರಿಯಾದಲ್ಲಿ ಚಾಸಾ.7 ನೇದ್ದವರ ಮನೆಯ ಮುಂದೆ ರೋಡಿನಲ್ಲಿ ಚಾಸಾ1, 4, 5 ನೇದ್ದವರು ತಮ್ಮ ಮೋಟಾರ ಸೈಕಲಗಳನ್ನು ನಿಲ್ಲಿಸುತ್ತಿದ್ದು ತನ್ನ ಕಾರ ತೆಗೆದುಕೊಂಡು ಹೋಗಲು ಅಡೆತಡೆ ಆಗುತ್ತಿದೆ ಅಂತಾ ಆರೋಪಿ.1 ನೆದ್ದವನು ಆರೋಪಿ.2 ನೇದ್ದವನೊಂದಿಗೆ ಕೂಡಿಕೊಂಡು ಸದರಿ ರಸ್ತೆಯಲ್ಲಿ ನಿಲ್ಲಿಸುವ ಮೋಟಾರ ಸೈಕಲಗಳನ್ನು ಸುಟ್ಟು ಹಾಕಬೇಕು ಅಂತಾ ಪ್ಲಾನ ಮಾಡಿ ಮೋಟಾರ ಸೈಕಲಗಳ ಪೆಟ್ರೋಲ ಪೈಪಗಳನ್ನು ಕಿತ್ತಿ ಅದರಲ್ಲಿಯ ಪೆಟ್ರೋಲನ್ನು ಮೋಟಾರ ಸೈಕಲಗಳ ಮೇಲೆ ಹಾಕಿ ಬೆಂಕಿ ಕಡ್ಡಿ ಪೆಟ್ಟಿಗೆಯಲ್ಲಿದ್ದ ಬೆಂಕಿ ಕಡ್ಡಿಗಳನ್ನು ಗೀರಿ ಬೆಂಕಿ ಹಚ್ಚಿದ್ದು , ಚಾಸಾ.1 ನೆದ್ದವರ ಮೋಟಾರ ಸೈಕಲ ನಂ. KA-32/ EB-8220 ಮತ್ತು ಚಾಸಾ.4 ನೇದ್ದವರ ಮೋಟಾರ ಸೈಕಲ ನಂ. KA-32/ X-4730 ಹಾಗೂ ಚಾಸಾ.5 ನೇದ್ದವರ ಹೊಂಡಾ ಎಕ್ಟಿವಾ ಸ್ಕೂಟಿ ಮೋಟಾರ ಸೈಕಲ ನಂ.KA-32/E Y-8928 ನೇದ್ದವುಗಳಿಗೆ ಬೆಂಕಿ ಹಚ್ಚಿ ಸುಟ್ಟು ಸುಮಾರು 80,000/- ರೂ.ಗಳಷ್ಟು ಹಾನಿ ಮಾಡಿದ್ದು ಇರುತ್ತದೆ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 435 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 23-01-2026 ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.452/2025</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ,

-ಃಃ ವಿರುದ್ದ ಃಃ-

ಆರೋಪಿ ನಂಃ 1. ಪ್ರಶಾಂತ ತಂದೆ ಬಕ್ಕಪ್ಪ ಕಾಕಿ
ವಃ 40 ವರ್ಷ, ಉಃ ಡ್ರೈವರ
ಸಾಃ ಬಸವನಗರ ಸೇಡಂ ಹಾಗೂ ಇನ್ನೊಬ್ಬರು.

**<u>ಆರೋಪಿತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ- ಆ-1

ಆ-2

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 23-01-2026 ಪ್ರ.ದ.ನ್ಯಾ.ದಂ. ಸೇಡಂ.